that a point of order ? When I called upon another Member Srimathi Bhageerathamma, a point of order was raised if I had refused permission, Members would have said that I am passing over their point of order.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹಿಂದಿನ ಅನುಭವವಿದೆ, ಸಹಕಾರ ಸಂಘಗಳಿಗೆ ಹಣ ಕೊಟ್ಟರೆ ಅದು ಸರಿಯಾಗಿ ವಿನಿಯೋಗವಾಗುವುದಿಲ್ಲವೆಂದು ಹೇಳಿದರು, ಅದಕ್ಕೆ ಬದಲು ರೂರಲ್ ಹೌಸಿಂಗ್ ಸೊಸೈಟಿ ಎಂದು ಮಾಡಿ....

ಶ್ರೀ ರಾಮಕೃಷ್ಣ ಹೆಗ್ಗಡೆ.—ಹಣ ಕೊಡುವುದು ದುರುಪಯೋಗವಾಗುತ್ತದೆಂದು ನಾನು ಹೇಳಲಿಲ್ಲ, ನಾನು ಹೇಳದೇಯಿರುವ ಮಾತನ್ನು ನನ್ನ ಬಾಯಲ್ಲಿ ತುರುಕಬಾರದು. ಕೇವಲ ಹಣವನ್ನು ಹಂಚುವುದು ಮಾತ್ರವಲ್ಲ ಈ ಸಹಕಾರಸಂಘಗಳ ಕೆಲಸ, ಅವರು ಮನೆಗಳನ್ನು ಕಟ್ಟುವ ಜವಾಬ್ದಾರಿಯನ್ನೂ ತೆಗೆದುಕೊಳ್ಳಬೇಕು. ಮಾನ್ಯ ಸದಸ್ಯರ ಸೂಚನೆಯನ್ನು ಗಮನದಲ್ಲಿಡುತ್ತೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಿಪಟೂರು ತಾಲ್ಲೂಕು ನಿಮ್ನವರ್ಗದವರ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ 42,800 ರೂಪಾಯಿ ಮಂಜೂರು ಮಾಡಿ ಎಷ್ಟೋ ದಿನವಾಯಿತು, ಮಂಜೂರ್ಮಾಡಿದ್ದರೂ ಕೂಡ ಹಂಚದೇ ಇರುವುದಕ್ಕೆ ಯಾರು ಜವಾಬ್ದಾರರು ? ಯಾಕೆ ಹಂಚಲಿಲ್ಲ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರಿಗೆ ಇಷ್ಟೇ ಹೇಳಬಲ್ಲೆ. ಎಷ್ಟು ಆತುರತೆಯಿಂದ ಸ್ಕ್ಯಾಂಕ್ಷನ್ ಮಾಡಿದ್ದಾರೆಯೋ ಅಷ್ಟೇ ಆತುರತೆಯಿಂದ ಹಣ ವಿನಿಯೋಗಿಸುವ ಕೆಲಸ ಮಾಡುತ್ತೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಮನೆ ಕಟ್ಟುವುದಕ್ಕೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಕೊಡುವ ಹಣವನ್ನೂ ನಿಮ್ಮ ಇಲಾಖೆಯಿಂದ ಕೊಡುವ ಹಣವನ್ನೂ ಒಟ್ಟುಗೂಡಿಸಿ ಕೊಟ್ಟರೆ ಹೆಚ್ಚು ಅನುಕೂಲವಾಗುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮನೆ ಕಟ್ಟುವುದಕ್ಕೆ ನಾವು ದುಡ್ಡು ಕೊಡುವುದಿಲ್ಲ. ಹಿಂದೆ ಒಂದು ಅಂಥ ಸ್ಕೀಂ ಇದ್ದಿತು. ಆ ಸ್ಕೀಂ ಪ್ರಕಾರ ಮನೆ ಕಟ್ಟುವ ಕೆಲಸ ಪ್ರಾರಂಭಮಾಡಿದ್ದು ಅದು ಮುಗಿಯದೇ ಇದ್ದರೆ ಅಂಥಾದ್ದನ್ನು ಮುಗಿಸಲು ದುಡ್ಡು ಕೊಡುತ್ತಿದ್ದಾರೆ. ಈಗ ಸಾಲ ಕೊಡುವುದಿಲ್ಲ. ಈಗ ಹೊಸ ಸ್ಕೀಂ ಸರಕಾರ ಮಾಡಿದ್ದಾರೆ.

Making Kodachadri in Hosanagar Taluk, Shimoga District as a Hill Station.

*Q.—219. Sri D. PARAMESWARAPPA (Honnali).

Will the Government be pleased to state :—

(*a*) whether there have been any proposals or representations to make Kodachadri in Hosanagar Taluk, Shimoga District a Hill Station ;

(*b*) whether any investigation was made and estimate prepared for the Hill Station ;

(*c*) whether they would expedite the construction of Hill Station at Kodachadri in view of the fact that the requisite factors for making it a Hill Station are complied with ?

*A.—Sri H. C. BORAIAH (Parliamentary Secretary Minister for Agriculture.)

(*a*) There was one in 1949 from the people of Sagar Taluk.

(*b*) Investigation was made but no estimate was prepared as the proposal was not accepted by Government ;

(*c*) The question of expediting the construction does not arise in view of the above.

Sri D. PARAMESWARAPPA.—Supplementary to (b): Am I correct in saying that the investigation discloses that the place is most suitable for the construction of a Hill Station ?

Sri H. C. BORIAH.—No.

Mr. SPEAKER.—The Same thing is repeated in the printed answer.

Sri D. PARAMESWARAPPA.—My question is : Am I correct in saying that the investigation discloses that the place is most suitable for the construction of a Hill Station ?

Sri H. C. BORIAH.—No.

Sri D. PARAMESWARPPA.—When was the investigation conducted in this connection ?

Sri H. C. BORIAH.—1949-1950.

ಶ್ರೀ ವೈ. ಮಂಜಯ್ಯಶೆಟ್ಟಿ.—ಹಳೇ ಮೈಸೂರಿನಲ್ಲಿ ಇನ್‌ವೆಸ್ಟಿಗೇಶನ್ ಮಾಡಿದ್ದೀರಿ. ಹೊಸ ಮೈಸೂರು ರಾಜ್ಯರಚಿತವಾದ ಮೇಲೆ ಇದನ್ನು ಪುನಃ ಏಮರ್ಶೆಮಾಡಿ ಗಿರಿಧಾಮವನ್ನಾಗಿಮಾಡಲು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಪುನಃ ಪರಿಶೀಲನೆ ಮಾಡಬೇಕಾದ ಕಾರಣವಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, 1949 ರಲ್ಲಿ ಸಾಗರ ತಾಲ್ಲೂಕಿನ ಜನರಿಂದ ಸಲಹೆಯೊಂದು ಬಂದಿದ್ದಿತು. ಪರಿಶೀಲನೆಯನ್ನು ಮಾಡಲಾಗಿದ್ದಿತು. ಆದರೆ ಆ ಸಲಹೆಯನ್ನು ಸರಕಾರ ಒಪ್ಪಿಕೊಳ್ಳದಿದ್ದ ಪ್ರಯುಕ್ತ ಅಂದಾಜನ್ನು ತಯಾರುಮಾಡಲಿಲ್ಲ ಎಂದು ಉತ್ತರ ಹೇಳಿದ್ದೀರಿ. ಆ ನಂತರದಲ್ಲಿ ಕೊಡಚಾದ್ರಿಯನ್ನು ಗಿರಿಧಾಮವನ್ನಾಗಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ಬೇರೆ ಸಲಹೆ ಸೂಚನೆಗಳು ಸರಕಾರಕ್ಕೆ ಬರಲಿಲ್ಲವೇನು ?

ಶ್ರೀ ಎಚ್. ಸಿ. ಬೋರಯ್ಯ.—ಬರಲಿಲ್ಲ.

ಶ್ರೀ ಎಸ್. ಎನ್. ಕೊಳ್ಕೆಬೈಲ್.—ಇಲ್ಲಿ ಹಿಂದಕ್ಕೆ ಶ್ರೀ ಶಂಕರಾಚಾರ್ಯರು ತಪಸ್ಸುಮಾಡಿದ ಸ್ಥಾನವಾಗಿದೆ ಇದೊಂದು ರಮಣೀಯ ತಪೋವನ ಸ್ಥಾನವಾಗಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದಯೇ ?

ಶ್ರೀ ಎಚ್. ಸಿ. ಬೋರಯ್ಯ.—ಬಂದಿಲ್ಲ.

ಶ್ರೀ ಎಸ್. ಗೋಪಾಲಗೌಡ:—ಶಿವಮೊಗ್ಗಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿರುವ ಕೊಡಚಾದ್ರಿಯು ಸಮುದ್ರ ತೀರದಿಂದ ಎಷ್ಟುದೂರ ಇದೆ, ಈ ಬೆಟ್ಟದಸ್ಥಾನ ಸಮುದ್ರ ಪಾತಳಿಯಿಂದ ಎಷ್ಟು ಎತ್ತರದಲ್ಲಿದೆ, ಅಲ್ಲಿಯ ಹವೆ ಹೇಗೆಇದೆ, ಎಷ್ಟು ಮಳೆ ಅಲ್ಲಿ ಆಗುತ್ತದೆ, ಅಲ್ಲಿ ಹೋಗುವುದಕ್ಕೆ ರಸ್ತೆಗಳು ಇವೆಯೇ ಈ ಎಲ್ಲವಿವರ ಈ ಸಭೆಗೆ ತಿಳಿಸಲು ತಮಗೆ ಸಾಧ್ಯವಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಅದು ಸಮುದ್ರಮಟ್ಟದಿಂದ 5,000 ಅಡಿ ಎತ್ತರದಲ್ಲಿ ಇದೆ ಅಲ್ಲಿಗೆ ಹೋಗಲು ರಸ್ತೆ ಇಲ್ಲ, ಅಲ್ಲಿಗೆ ಹೋಗಲು ಎರಡು ಕಾಲು ದಾರಿ ಅನುಸರಿಸಬೇಕಾಗುತ್ತದೆ ವರ್ಷದಲ್ಲಿ ಅಲ್ಲಿ ಒಂದು ಜಾತ್ರೆ ಸಹ ಆಗುತ್ತದೆ. ಸುಮಾರು 120 ರಿಂದ 200 ಇಂಚು ಮಳೆಯಾಗುತ್ತದೆ, ಹವಾ ಸೊಗಸಾಗಿದೆ, ಬಾಕಿ ವಿವರ ನನ್ನ ಹತ್ತಿರ ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಸರಕಾರದ ವರದಿಯಲ್ಲಿ ಏನೇನು ವಿವರ ಇದೆ ಅದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ವಿವರ ತಿಳಿಸುತ್ತೇನೆ.

ಶ್ರೀ ಎಸ್. ಎಸ್. ಕೊಳ್ಕೆಬೈಲ್.—ಕೊಡಚಾದ್ರಿ ತಪೋವನದಲ್ಲಿ ಶ್ರೀ ಶಂಕರಾಚಾರ್ಯರವರು ತಪಸ್ಸು ಮಾಡಿದ್ದಾರೆ. ತಪಸ್ಸು ಮಾಡಿದ ಸ್ಥಳದಲ್ಲಿ ಒಂದು ಆಶ್ರಮ ಇದ್ದಿತು ಎಂದು ಜನ ಹೇಳುತ್ತಾರೆ. ಈ ತಪೋವನದ ಹತ್ತಿರ ಒಂದು ದೇವಸ್ಥಾನ ಸಹ ಅದೆ. ಅದು ಗಿರಿಧಾಮವನ್ನಾಗಿಮಾಡಲು ಯೋಗ್ಯ ಸ್ಥಾನವಾಗಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಅಲ್ಲಿ ಒಂದು ದೇವಸ್ಥಾನ ಇದೆ. ಬಾಕಿ ವಿವರ ಇಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸ್ವಲ್ಪ ಹಣ ಖರ್ಚುಮಾಡಿ ಹೊಸದಾಗಿ ಇನ್‌ವೆಸ್ಟಿಗೇಶನ್ ಮಾಡುವುದಕ್ಕೆ ಬರುತ್ತದಲ್ಲವೇ ? ಅದಕ್ಕೆ ತೊಂದರೆಯೇನಿದೆ ?

ಶ್ರೀ ಎಚ್. ಸಿ. ಬೋರಯ್ಯ.—ಈ ಮೊದಲು ಇನ್‌ವೆಸ್ಟಿಗೇಶನ್‌ಮಾಡಿ ತೀರ್ಮಾನತೆಗೆದು ಕೊಂಡಿದ್ದಾರೆ. ಅದುದರಿಂದ ಪುನಃ ಪರಿಶೀಲನೆಮಾಡತಕ್ಕ ಸಂಗತಿ ಉದ್ಭವಿಸುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೊಡಚಾದ್ರಿಯನ್ನು ಗಿರಿಧಾಮವನ್ನಾಗಿ ಮಾಡಲು ಯೋಗ್ಯ ಸ್ಥಾನವಾಗಿದೆ ಎಂದು ವಿವರಗಳನ್ನು ನೋಡಿದ ಮೇಲೆ ಅನಿಸುತ್ತದಲ್ಲವೇ ?

ಶ್ರೀ ಜಿ. ನಾರಾಯಣಗೌಡ.—1952ನೇ ಇಸವಿಯಲ್ಲಿ ಪರಿಶೀಲನೆ ಮಾಡಿದಾಗ್ಗೆ ಕಂಡು ಬಂದುದು ಏನೆಂದರೆ, ಅಲ್ಲಿಗೆ ಹೋಗುವುದಕ್ಕೆ 39 ಮೈಲಿ ರೋಡ್ ಮಾಡಬೇಕಾಗುತ್ತದೆ, ಆಗಿನ ಅಂದಾಜು ಪ್ರಕಾರ ವಿದ್ಯುತ್ ಶಕ್ತಿ ಒದಗಿಸಲು ಒಂದು ಲಕ್ಷ ರೂಪಾಯಿ ಖರ್ಚುಬರುತ್ತದೆಂದು ಇದ್ದುದು ಇಂದು 5 ಲಕ್ಷ ರೂಪಾಯಿ ಖರ್ಚಾಗಬಹುದು. ಇವೆನ್ನೆಲ್ಲಾ ಯೋಚನೆಮಾಡಿ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಇಷ್ಟು ಹಣ ಖರ್ಚು ಮಾಡುವುದು ಸಾಧುವೇ ಎಂಬುದನ್ನು ಯೋಚನೆ ಮಾಡಿ ಇದನ್ನು ಕೈ ಬಿಟ್ಟು ಬಿಟ್ಟಿದೆ.

Sri D. PARAMESHWARAPPA.—In view of the hirtorical backgro-und of this place and also in view of the fact that it commands a very good view of the sea, would the Government kindly reconsider this proposal ?

ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಇದು ಎಲ್ಲ ರೀತಿಯಿಂದ ಒಳ್ಳೇ ಕ್ಷೇತ್ರ, ದೊಡ್ಡವರು ತಪಸ್ಸುಮಾಡಿದ ಸ್ಥಳ, ಜನರು ಹೋಗಿ ಇರಲು ಯೋಗ್ಯ ಗಿರಿಧಾಮವಾಗಿದೆ, ಹಣಕಾಸಿನ ಅನುಕೂಲತೆ ನೋಡಿಕೊಂಡು ಇದನ್ನು ಅಭಿವೃದ್ಧಿಪಡಿಸುತ್ತೇವೆ.

Sri D. PARAMESWARAPPA.—The Minister for Agriculture said that in view of the financial stringency, it is not possible to take up the work early. Would he otherwise admit that the place should be improved ?

Mr. SPEAKER.—Let us see what the the Hon' ble Chief Minister is going to tell us.

ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಇವೆರ್ನಾ ಬಹಳ ಪವಿತ್ರವಾದ ಸ್ಥಳಗಳು, ದೊಡ್ಡವರು, ಮಹಾತ್ಮರು ಕುಳಿತು ತಪಸ್ಸನ್ನು ಮಾಡಿರತಕ್ಕ ಸ್ಥಳಗಳೆಂದು ಹೇಳುತ್ತಿದ್ದಾರೆ. ನಾವು ನಮ್ಮ ಅನುಕೂಲ ನೋಡಿಕೊಂಡು ಇವುಗಳೆಲ್ಲವನ್ನೂ ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ. —ಇದು ತುಂಬಾ ರಮಣೀಯವಾದ ಸ್ಥಳ ಕೊಲ್ಲೂರಿಗೆ ಮತ್ತು ನನ್ನ ಕ್ಷೇತ್ರಕ್ಕೆ ಸಮೀಪದಲ್ಲಿರತಕ್ಕ ಸ್ಥಳ, ಮಲೆನಾಡಿನ ಮಧ್ಯರಾಷ್ಟ್ರ, ಸಮುದ್ರಕ್ಕೆ ಸಮೀಪವಾಗಿರುವುದರಿಂದ ಇದರ ಪಕ್ಕದಲ್ಲೇ ವೆಸ್ಟ್‌ಕೋಸ್ಟ್ ರಸ್ತೆ ಹೋಗುವುದರಿಂದ ಹಾಗೂ ಇಲ್ಲಿ ವರ್ಷಕ್ಕೊಮ್ಮೆ ಜಾತ್ರೆಯಾಗುತ್ತಿರುವುದರಿಂದ ಈ ಕಾರಣಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಇಲ್ಲಿಗೊಂದು ರಸ್ತೆಯನ್ನು ಮಾಡಿಸಿ ಇದನ್ನೊಂದು ಗಿರಿಧಾಮವನ್ನಾಗಿ ಮಾಡಲು ಮೈನೂರು ಸರ್ಕಾರದವರು ಕ್ರಮ ಕೈಗೊಳ್ಳುತ್ತಾರೆಯೆ ?

ಶ್ರೀ ಎಸ್. ನಿಜಲಿಂಗಪ್ಪ.—ಸರ್ಕಾರದವರು ಇದೆಲ್ಲವನ್ನೂ ತೀವ್ರವಾಗಿ ಪರಿಶೀಲಿಸುವರು.

Mr. SPEAKER:—I will pass on to the questions not taken up, because the members were abesent.

Amruthamahal Kavals in Tumkur District.

*Q.—126. **Sri B. BYRAPPAJI** (Turuvekere).—

Will the Government be pleased to state.—

(*a*) whether there are any Amruthmahal Kavals in Tumkur District;

(*b*) if so, how many Kavals are there and what is the total extent of the Kavals;

(*c*) whether there is any proposal of releasing these Amruthmahal Kavals for *bona fide* cultivation ?